129

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎ. ವಸಂತಕುಮಾರ್ ಇವರು ನಿಯಮ 72 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ (129)ಕ್ಕೆ ಉತ್ತರ ನೀಡುವ ಬಗ್ಗೆ**

**ಸೂಚನೆ:-**

ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕು ಅತ್ತನೂರು ಗ್ರಾಮದ ಸರ್ವೆ ನಂ: 165 ರ ಜಮೀನು ಪರಿಶಿಷ್ಟ ಜಾತಿಗೆ ಸೇರಿದ ಗೇಣಿದಾರರಿಗೆ ಕರ್ನಾಟಕ ಕೆಲವು ಇನಾಂ ರದ್ದಿಯಾಯ್ತಿ ಕಾಯ್ದೆ 1977 ಕಲಂ 5 ರ ಅನ್ವಯ ಭೂ ನ್ಯಾಯಮಂಡಳಿಯಿಂದ ಅಧಿಭೋಗದಾರಿಕೆ ಹಕ್ಕು, ಮಂಜೂರು ಹಾಗೂ ನೊಂದಣಿ ಹಕ್ಕು ಮಂಜೂರು ನೀಡಿದ್ದು, ಸದರಿ ಜಮೀನು ಪಿ.ಟಿ.ಸಿ.ಎಲ್ ಕಾಯ್ದೆ 1978 ಸೆಕ್ಷನ್ 3 (1)(ಬಿ) "ಮಂಜೂರಾದ ಭೂಮಿ" ವ್ಯಾಪ್ತಿಗೆ ಒಳಪಡುತ್ತದೆಯೇ, ಈ ರೀತಿಯ ಮಂಜೂರಾದ ಜಮೀನುಗಳು ಪಿಟಿಸಿಎಲ್ ಕಾಯ್ದೆ 1978 ಸೆಕ್ಷನ್-3 (1)(ಬಿ) "Granted land" ವ್ಯಾಪ್ತಿಗೆ ಒಳಪಡುಸುವುದಿಲ್ಲವೆಂದು ಸಹಾಯಕ ಆಯುಕ್ತರು ರಾಯಚೂರು ಇವರು ಸದರಿ ಜಮೀನಿನ ವ್ಯಾಜ್ಯ ಪ್ರಕರಣದಲ್ಲಿ ಕಾಯ್ದೆಗೆ ವಿರುದ್ಧ ಆದೇಶ ನೀಡಿದ್ದು, ಸರ್ಕಾರದ ಮುಂದಿನ ಕ್ರಮದ ಕುರಿತು ಸ್ಪಷ್ಟ ವಿವರ ನೀಡಿ, ಈ ರೀತಿಯ ಎಸ್.ಸಿ/ಎಸ್.ಟಿ (ಟೆನೆಂಟ್ಸ್) ಗೇಣಿದಾರರಿಗೆ ಭೂ ನ್ಯಾಯಮಂಡಳಿಯಿಂದ ಅಧಿಬೋಗದಾರಿಕೆ ಹಕ್ಕು ಮಂಜೂರಾದ ಜಮೀನುಗಳು ಪಿಟಿಸಿಎಲ್ ಕಾಯ್ದೆ 3 (1)(ಬಿ) "Granted land" ವ್ಯಾಪ್ತಿಗೆ ಒಳಪಡುತ್ತವೆ ಎಂದು ಸ್ಪಷ್ಟನೆ ನೀಡಿ, ಈ ರೀತಿಯ ಗೊಂದಲಗಳ ಹಾಗೂ ತೊಡಕುಗಳ ನಿವಾರಣೆಗೆ ಸೂಕ್ತ ಕಾನೂನಾತ್ಮಕ ಕ್ರಮ ಕೈಗೊಂಡು ಸಾವಿರಾರು ಬಡ ಎಸ್.ಸಿ/ಎಸ್.ಟಿ ಗೇಣಿದಾರರ ಕುಟುಂಬಗಳಿಗೆ ಭೂರಕ್ಷಣೆ ನೀಡಿ ಅನ್ಯಾಯ ಸರಿಪಡಿಸಿ, ನ್ಯಾಯ ಒದಗಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಹೇಳಿಕೆ:-**

ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ 1978, ಪ್ರಕರಣ 3(1)(ಬಿ) ರಡಿಯಲ್ಲಿ " ಮಂಜೂರಾದ ಭೂಮಿ" ಎಂದರೆ ಅನುಸೂಚಿತ ಜಾತಿಗಳಲ್ಲಿ ಮತ್ತು ಅನುಸೂಚಿತ ಬುಡಕಟ್ಟುಗಳಲ್ಲಿ ಯಾವುದಕ್ಕಾದರೂ ಸೇರಿದ ವ್ಯಕ್ತಿಗೆ ಸರ್ಕಾರವು ಮಂಜೂರು ಮಾಡಿದ ಯಾವುದೇ ಭೂಮಿ, ಮತ್ತು ಇದು ಅನುವಂಶಿಕ ಹುದ್ದೆಗಳಿಗೆ ಅಥವಾ ಹಕ್ಕುಗಳಿಗೆ ಸಂಬಂಧಿಸಿದವುಗಳನ್ನು ಹೊರತುಪಡಿಸಿ, ಬೇಸಾಯದ ಸುಧಾರಣೆಗಳಿಗೆ ಅಥವಾ ಭೂ ಪರಿಮಿತಿಗಳಿಗೆ ಅಥವಾ ಇನಾಮುಗಳ ರದ್ದಿಯಾತಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಬದ್ಧ ಕಾನೂನಿನ ಮೇರೆಗೆ ಅಂಥ ವ್ಯಕ್ತಿಗೆ ಹಂಚಲಾದ ಅಥವಾ ಮಂಜೂರು ಮಾಡಲಾದ ಭೂಮಿಯನ್ನು ಒಳಗೊಳ್ಳುತ್ತದೆ ಮತ್ತು "ಮಂಜೂರಾದ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು; ಎಂದು ಇರುತ್ತದೆ.

ಸಹಾಯಕ ಆಯುಕ್ತರು, ರಾಯಚೂರು ರವರು ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮದ ಜಮೀನು ಸ.ನಂ.165 ರಲ್ಲಿ ಪರಿಶಿಷ್ಟ ಜಾತಿಯವರಿಗೆ ಮಂಜೂರಾದ ಜಮೀನನ್ನು ಪಿಟಿಸಿಎಲ್ ಕಾಯ್ದೆ ಉಲ್ಲಂಘಿಸಿರುವ ಕುರಿತು ವಿಚಾರಣೆ ಕೈಗೊಂಡಿದ್ದು, ಪ್ರಸ್ತಾವಿತ ಜಮೀನು ಮೂಲತಃ ಇನಾಂ ಜಮೀನಾಗಿದ್ದು, ಸರ್ಕಾರದ ಅಧಿಸೂಚನೆ ಪ್ರಕಾರ ಪಿಟಿಸಿಎಲ್ ಕಾಯ್ದೆಗೆ ಒಳಪಡುವುದಿಲ್ಲವೆಂದು ಸದರಿ ಪ್ರಕರಣದಲ್ಲಿ ಆದ ಖರೀದಿ ಪ್ರಕ್ರಿಯೆಯಲ್ಲಿ ಪಿಟಿಸಿಎಲ್ ಕಾಯ್ದೆ ಉಲ್ಲಂಘನೆ ಆಗಿರುವುದು ಕಂಡುಬರುವುದಿಲ್ಲವೆಂದು ತಿಳಿಸಿ ದಿನಾಂಕ:12.01.2024 ರಂದು ಆದೇಶಿಸಲಾಗಿರುತ್ತದೆ. ಪ್ರಕರಣದಲ್ಲಿ ಶ್ರೀಮತಿ ಶೇಷಮ್ಮ ಗಂಡ ಜಯಕೃಷ್ಣ ಇವರು ಈಗಾಗಲೇ ಸದರಿ ಆದೇಶದ ವಿರುದ್ಧ ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ, ಇವರಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.

ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ 1978 ರಲ್ಲಿ ಉಪಬಂಧಿಸಲಾಗಿರುವಂತೆ ಕ್ರಮವಹಿಸಲು ಅವಕಾಶವಿರುತ್ತದೆ.

**ಸಂಖ್ಯೆ: ಕಂಇ 9 ಎಲ್‌ಆರ್‌ಎಸ್ 2025**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**